

(6ನೇ ಪುಟದಿಂದ)

ಕೀಟಗಳ ಕಡಿತದಿಂದ ಹಿಡಿದು ಹಾವಿನ ಕಡಿತದ ಚಿಕಿತ್ಸೆಯ ತನಕ ಇದರ ಬೇರಿನ ಉಪಯೋಗಗಳಿವೆ. ನರಮಂಡಲವನ್ನು ಉತ್ತೇಜಿಸುವ ಗುಣವೂ ಈ ಸಸ್ಯಕ್ಕಿದೆ. ಮೂಷಿಕ ವರ್ಗದಲ್ಲಿ ಇದು ಕಾರ್ಸಿನೋಜೆನಿಕ್ (ಕ್ಯಾನ್ಸರ್ ಕಾರಕ) ಗುಣಗಳನ್ನು ತೋರಿಸುತ್ತದೆಯಂತೆ. ಹೆಚ್ಚಾಗಿ ವಿಷಗಳ ದುಷ್ಪರಿಣಾಮಗಳ ನಿವಾರಣೆಗಾಗಿ ಹಳ್ಳಿಗಾಡಿನಲ್ಲಿ ಬಳಕೆಯಾಗುತ್ತದೆ.

ಕ್ರಿಮಿಕೀಟಗಳ ವಿಷಗಳಿಗೂ, ಹೊಟ್ಟೆಯ ಮೂಲಕ ಸೇವಿಸಿದ ವಿಷಗಳಿಗೂ ಪರಿಣಾಮಕಾರಿ ಔಷಧವಿದು. ಸ್ವಲ್ಪಮಟ್ಟಿಗೆ ನೋವು ನಿವಾರಕವಾಗಿಯೂ ಈ ಬಳ್ಳಿ ಉಪಯುಕ್ತ. ಇದರ ಒಣಗಿದ ಬೇರು ಆಯುರ್ವೇದ ಅಂಗಡಿಗಳಲ್ಲಿ ಹೆಚ್ಚಾಗಿ ಲಭ್ಯವಿದೆ. ಕಾಡುಗಳಿಂದ ಬೇರುಗಳನ್ನು ಅಗೆದು ತೆಗೆದು ಹಳ್ಳಿಗಳಲ್ಲಿ ಹಿಂದಿನವರು ಇದನ್ನು ಬಳಸುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಾಕಷ್ಟು ಮನೆಗಳಲ್ಲಿ ಇದರ ಸಂಗ್ರಹ ಇರುತ್ತಿತ್ತು. ಆದರೆ ಇಂದಿನ ಆಧುನಿಕ ವೈದ್ಯಶಾಸ್ತ್ರದ ದಿನಗಳಲ್ಲಿ ಈ ಮೂಲಿಕೆಯನ್ನು ಕಾಣುವುದೇ ಅಪರೂಪವಾಗಿದೆ.

